13-12-2023

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಸೂರಜ್ ರೇವಣ್ಣರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಉತ್ತರ.**

**ವಿಷಯ:-**

ಅರಸೀಕೆರೆ ನಗರಸಭೆಯ 31 ವಾರ್ಡ್‌ಗಳ ಮೂಲಭೂತ ಸೌಕರ್ಯಕ್ಕಾಗಿ ಅನುದಾನ ಮಂಜೂರಾಗಿದ್ದರೂ ಕೆಲವೊಂದು ವಾರ್ಡ್‌ಗಳಿಗೆ ಅನುದಾನ ಮಂಜೂರು ಮಾಡಿ ತಾರತಮ್ಯವಾಗಿರುವ ಬಗ್ಗೆ.

*****

**ಉತ್ತರ:-**

ಅರಸೀಕೆರೆ ನಗರಸಭೆಗೆ 31 ವಾರ್ಡ್‌ಗಳ ಮೂಲ ಸೌಕರ್ಯಾಭಿವೃದ್ಧಿ ಕಾಮಗಾರಿಗಳಿಗಾಗಿ 2023-24ನೇ ಸಾಲಿಗೆ ಈ ಕೆಳಕಂಡ ವಿವಿಧ ಯೋಜನೆಯಡಿ ಸರ್ಕಾರದಿಂದ ಅನುದಾನ ಹಂಚಿಕೆ ಮಾಡಲಾಗಿರುತ್ತದೆ.

| ಕ್ರ. ಸಂ | ಯೋಜನೆಯ ವಿವರ | ಹಂಚಿಕೆ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1. | ಎಸ್‌ಎಫ್‌ಸಿ ಮುಕ್ತನಿಧಿ | 117.00 |
| 2. | ಎಸ್‌ಎಫ್‌ಸಿ ಕುಡಿಯುವ ನೀರು | 2.36 |
| 3. | ಎಸ್‌ಎಫ್‌ಸಿ (ಎಸ್‌ಸಿಎಸ್‌ಪಿ ನಿಧಿ) | 26.00 |
| 4. | ಎಸ್‌ಎಫ್‌ಸಿ (ಟಿಎಸ್‌ಪಿ) | 11.00 |
| 5. | 15ನೇ ಹಣಕಾಸು | 337.00 |

ಮೇಲ್ಕಂಡಂತೆ ಸರ್ಕಾರದ ವಿವಿಧ ಯೋಜನೆಯಡಿ ಹಂಚಿಕೆಯಾಗಿರುವ ಅನುದಾನದಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕೆ ಕ್ರಿಯಾ ಯೋಜನೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯ ಅನುಷ್ಠಾನಕ್ಕೆ ಕ್ರಮವಹಿಸಲಾಗಿದೆ. ಸರ್ಕಾರದ ಮಾರ್ಗಸೂಚಿಯನ್ವಯ ಕ್ರಿಯಾ ಯೋಜನೆ ತಯಾರಿಸಿದ್ದು, ಇದರಲ್ಲಿ ಯಾವುದೇ ತಾರತಮ್ಯವೆಸಗಿರುವುದಿಲ್ಲ.

ಸಂಖ್ಯೆ:ನಅಇ 87 ಎಸ್‌ಎಫ್‌ಸಿ 2024

**(ರಹೀಂ ಖಾನ್)**
ಪೌರಾಡತಳಿತ ಹಾಗೂ ಹಜ್ ಸಚಿವರು